**<u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ</u>**
**<u>ಅಫಜಲಪೂರ</u>**

ಸಿಸಿ ನಂ.262/2014

ಚಾಸಾ-1 ಪ್ರಾಸಾ-1

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು
ದಿನಾಂಕ: 12.11.2019

| | | |
|---|---|---|
| ಹೆಸರು | ಃ | ಸಂಪತಕುಮಾರ ಪಾಟೀಲ |
| ತಂದೆ ಹೆಸರು | ಃ | ಪುರುಷೋತ್ತಮರಾವ |
| ವಯಸ್ಸು | ಃ | 61-ವರ್ಷ |
| ಉದ್ಯೋಗ | ಃ | ನಿವೃತ್ತ ನೌಕರ |
| ವಾಸಸ್ಥಳ | ಃ | ಕಲಬುರಗಿ |

ಮುಖ್ಯ ವಿಚಾರಣೆಃ ಎಪಿಪಿ ಯವರಿಂದ

2007 ರಿಂದ ಜುಲೈ-2012 ರವರೆಗೆ ತಾಲೂಕ ಪಂಚಾಯತದಲ್ಲಿ ಕಾರ್ಯನಿರ್ವಾಹಕ ಅಧಿಕಾರಿಯೆಂದು ಎಂದು ಸೇವೆ ಸಲ್ಲಿಸಿದ್ದೇನೆ.

1 ನೇ ಆರೋಪಿ ನಮ್ಮ ಕಚೇರಿಯಲ್ಲಿ ಲೆಕ್ಕಾಧಿಕಾರಿಯಿದ್ದನು. 2 ರಿಂದ 4 ನೇ ಆರೋಪಿತರು ನನಗೆ ಗೊತ್ತಿಲ್ಲ. ಚಾಸಾ-6 ಜಿ.ಪಂ. ದಲ್ಲಿ ಲೆಕ್ಕಾಧಿಕಾರಿಯಾಗಿದ್ದರು.

2012 ರಲ್ಲಿ 22 ಗ್ರಾಮ ಪಂಚಾಯತಿಗಳಿಗೆ ಅಂದಾಜು 12 ಲಕ್ಷ ಹಣ ನೀರು ನಿರ್ವಹಣೆಗಾಗಿ ಸರಕಾರದಿಂದ ಹಂಚಿಕೆಯಾಗಿತ್ತು. ಜಿಲ್ಲಾ ಪಂಚಾಯತಿಯಿಂದ ನನಗೆ ನೀಡಿದ ನಿರ್ದೇಶನದ ಮೇರೆಗೆ 2 ರಿಂದ 4 ನೇ ಆರೋಪಿತರ ವಿರುದ್ಧ ದೂರು ದಾಖಲಿಸಿದ್ದು ನಂತರ 1 ನೇ ಆರೋಪಿತನ ವಿರುದ್ಧ ದೂರನ್ನು ಸಲ್ಲಿಸಿರುತ್ತೇನೆ.

ಜಿಲ್ಲಾ ಪಂಚಾಯತಿಯ ಲೆಕ್ಕ ಶಾಖೆಯಿಂದ 1 ನೇ ಆರೋಪಿತನಿಗೆ ಅಂದಾಜು 12 ಲಕ್ಷ ಚಿಲ್ಲರೆ ಮೌಲ್ಯದ ಒಟ್ಟು 22 ಡಿಡಿಗಳನ್ನು 1 ನೇ ಆರೋಪಿಗೆ ನೀಡಿರುವುದಾಗಿ ನನಗೆ ತಿಳಿಸಿರುತ್ತಾರೆ. 1 ನೇ ಆರೋಪಿ ನಿಯಮಾನುಸಾರ ನನ್ನ ಗಮನಕ್ಕೆ ತರದೇ ಯಾವುದೇ

ರಜಿಸ್ಟರನಲ್ಲಿ ಎಂಟ್ರಿ ಮಾಡದೇ ಹಣವನ್ನು 3 ನೇ ಆರೋಪಿತಳ ವಿಎಸ್ ಎಸ್ ಎನ್ ಸಹಕಾರಿ ಸಂಘದ ಖಾತೆ ನಂ.526 ಕ್ಕೆ ಅಂದಾಜು 10 ಲಕ್ಷಣ ಮೌಲ್ಯವುಳ್ಳ 15 ಡಿಡಿಗಳು ಜಮಾ ಆಗಿರುವುದು ಆಡಿಟ್ ವರದಿಯಿಂದ ನನಗೆ ಗೊತ್ತಾಗಿರುತ್ತದೆ. ಸದರಿ ಒಟ್ಟು 22 ಡಿಡಿಗಳು ಅಧ್ಯಕ್ಷರು, ಪಿಡಿಒ ಜಂಟಿಯಾಗಿ ಗ್ರಾಮ ಪಂಚಾಯತಿ ಊರಿನ ಹೆಸರಿನಲ್ಲಿ ನಮೂದಾಗಿದ್ದವು.

ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿ2 ದ್ದು ಮುಂದೂಡಲಾಯಿತು.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ

ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ